ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.)
ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ನಿಗಮ ಕಛೇರಿ,
ನವನಗರ, ಪಿ.ಬಿ. ರೋಡ, ಹುಬ್ಬಳ್ಳಿ – 580 025.
Ph No- 91 94483 70226

HUBLI ELECTRICITY SUPPLY COMPANY LIMITED
(Wholly owned Govt. of Karnataka undertaking)
General Manager (Tech), Corporate Office,
Navanagar, P.B.Road, Hubballi-25
Website : www.hescom.co.in
E-mail ID: gmt.hescom@gmail.com

Corporate Identity Number (CIN): U31401KA2002SGC030437

ಸಂಖ್ಯೆ: ಹೆಸ್ಕಾಂ/ಪ್ರವ್ಯ/ಇಇ(ಆರ.ಎ)/ಎಇಇ/18-19 04S-4370. ದಿನಾಂಕ: 5 FEB 2019
ಲಗತ್ತು :

## ಸುತ್ತೋಲೆ

**ವಿಷಯ :** ಪೂರ್ವ ಪಾವತಿ ಮಾಪಕಗಳನ್ನು ಅಳವಡಿಸಲಾಗುವ ಮತ್ತು ಈಗಾಗಲೇ ಅಳವಡಿಸಿರುವ ತಾತ್ಕಾಲಿಕ ಸ್ಥಾವರಗಳಿಗೆ ಮುಂಗಡ ಬಳಕೆ ಶುಲ್ಕವನ್ನು ಪೂರ್ವ ಪಾವತಿ ಬಳಕೆ ಶುಲ್ಕವಾಗಿ ಬದಲಾಯಿಸುವ ಬಗ್ಗೆ.

**ಉಲ್ಲೇಖ :**
1. ಕರ್ನಾಟಕ ವಿದ್ಯುಚ್ಛಕ್ತಿ ಕಾಯಿದೆ 2003 ರ ಷರತ್ತು 47 ರ ಕ್ರ.ಸಂ. (5).
2. ಕ.ವಿ.ಆ ಆಯೋಗದ ಆದೇಶ : ಓ.ಪಿ. 34 /2015 ಸಂಖ್ಯೆ : N/65/15 ದಿ : 02.06.2016

*** * ***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಚಾಲ್ತಿಯಲ್ಲಿರುವ ಜಕಾತಿ ಆದೇಶದ ಅನುಸಾರವಾಗಿ ಎಲ್ಲಾ ತಾತ್ಕಾಲಿಕ ಸ್ಥಾವರಗಳಿಗೆ ಪೂರ್ವಪಾವತಿ ಮಾಪಕಗಳನ್ನು ಕಡ್ಡಾಯವಾಗಿ ಅಳವಡಿಸುವ ಸಲುವಾಗಿ ಹುಬ್ಬಳ್ಳಿ ನಗರ ಹಾಗೂ ಬೆಳಗಾವಿ ನಗರಗಳಿಗೆ ಈಗಾಗಲೇ ಕಾರ್ಯಾದೇಶ ನೀಡಲಾಗಿದ್ದು ಹಾಗೂ ಅಂತಹ ಗ್ರಾಹಕರು ಮಾತ್ರ ಈ ಕೆಳಗಿನ ಶುಲ್ಕಗಳನ್ನು ಪಾವತಿಸಬೇಕಾಗುತ್ತದೆ.

1. ಸೇವಾ ಶುಲ್ಕಗಳು (Service Charges)
2. ಮಾಪಕದ ಬಾಡಿಗೆ (Meter rentals Rs. 75/- per week)
3. ಮಾಪಕ ಭದ್ರತೆ ಶುಲ್ಕ (Meter Security deposit, equivalent to meter cost in excess of 57 days)
4. ಪೂರ್ವ ಪಾವತಿ ಬಳಕೆ ಶುಲ್ಕ (Prepaid consumption charges) ಕೆಳಗಿನ ಪ್ಯಾರಾ 4 ರಲ್ಲಿ ವಿವರಿಸಿದಂತೆ.

ಮುಂದುವರೆದಂತೆ, ಇನ್ನು ಮುಂದೆ ಪೂರ್ವಪಾವತಿ ಮಾಪಕಗಳ ಮಂಜೂರಾದ ಹೊರೆ ಹಾಗೂ ಗರಿಷ್ಠ ಬೇಡಿಕೆಗಳು ಕಡ್ಡಾಯವಾಗಿ 1 : 1 ಅನುಪಾತದಲ್ಲಿ ಪ್ರೋಗ್ರಾಂ ಆಗಿರಬೇಕು. ಈ ಅಗತ್ಯತೆಯನ್ನು ಪಾಲಿಸಲು ಪೂರ್ವ ಪಾವತಿ ಮಾಪಕಗಳ ಸೇವೆ ಒದಗಿಸುವ ಸಂಸ್ಥೆಯು ಅಗತ್ಯ ಕ್ರಮ ಕೈಗೊಂಡು ಶೀಘ್ರವೇ ಪ್ರೋಗ್ರಾಂ ಆಗುವಂತೆ ಖಾತರಿಗೊಳಿಸುವುದು.

ತತ್ಸಂಬಂಧ, ತಾತ್ಕಾಲಿಕ ಸ್ಥಾವರಗಳಿಗೆ ವಿವಿಧ ಸನ್ನಿವೇಶಗಳಲ್ಲಿ ಸಂಬಂಧಿಸಿದ ಉಪವಿಭಾಗಾಧಿಕಾರಿಗಳು ಈ ಕೆಳಕಂಡಂತೆ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಲಾಗಿದೆ.

1. ಮುಂಗಡ ಬಳಕೆ ಶುಲ್ಕ (advance consumption charges) ವಸೂಲಿ ಮಾಡುವಂತಿಲ್ಲ.

2. ಮಂಜೂರಾದ ಹೊರೆಯ ಆಧಾರದ ಮೇಲೆ ಮುಂಗಡ ಬಳಕೆಯ ಶುಲ್ಕದ ಮೊತ್ತವನ್ನು ಪೂರ್ವ ಪಾವತಿ ಬಳಕೆ ಶುಲ್ಕವಾಗಿ ಪರಿವರ್ತಿಸಿಕೊಳ್ಳುವುದು ಹಾಗೂ ಹೆಚ್ಚುವರಿಯಾಗಿ ಪೂರ್ವ ಪಾವತಿ ಬಳಕೆ ಶುಲ್ಕ ಇನ್ನು ಮುಂದೆ ಇರುವುದಿಲ್ಲ. ಪರಿವರ್ತಿಸಿ ಉಳಿದಿರುವ ಮೊತ್ತವನ್ನು ಪೂರ್ವ ಪಾವತಿಗಾಗಿ ಹಾಗೂ ಮಾಪಕ ಬಾಡಿಗೆ ಶುಲ್ಕಕ್ಕಾಗಿ ಹೊಂದಾಣಿಕೆ ಮಾಡಿಕೊಳ್ಳುವುದು.

3. ಸೇವಾ ಶುಲ್ಕ ಹಾಗೂ ಮಾಪಕ ಭದ್ರತೆ ಶುಲ್ಕಗಳನ್ನು ಪ್ರಸ್ತುತ ನಿಯಮಗಳ ಪ್ರಕಾರ ವಸೂಲಿ ಮಾಡುವುದು.

4. ಪೂರ್ವ ಪಾವತಿ ಬಳಕೆ ಶುಲ್ಕವನ್ನು ಈ ಕೆಳಕಂಡಂತೆ ನಿರ್ಧರಿಸುವುದು.

| ಕ್ರ.ಸಂ. | ವಿವರ | |
|---|---|---|
| A | ಮೊದಲನೇ ಸಲ ಪಾವತಿಯಾಗಿ (ಪ್ರತಿ ಕಿ.ವ್ಯಾ. ಗೆ ಪ್ರತಿ ದಿನಕ್ಕೆ 12 ಯುನಿಟ್ಟುಗಳಂತೆ 28 ದಿನಗಳ ಅವಧಿಗೆ ಯುನಿಟ್ಟಿನ ದರ + 9% ವಿದ್ಯುತ್ ತೆರಿಗೆ ವಿಧಿಸುವ ಆಧಾರದ ಮೇಲೆ) | ರೂ. 3773 |
| B | ನಂತರದ ಮರು ಪಾವತಿ (ರೀಚಾರ್ಜ/ನವೀಕರಣ) ಅವಧಿಗೆ | |
| 1 | ಸಾಪ್ತಾಹಿಕ ಕನಿಷ್ಠ ಮೊತ್ತ | ರೂ. 200 |
| | ನಾಲ್ಕು ವಾರಗಳಿಗೆ | ರೂ. 800 |
| 2 | ಒಂದು ಯುನಿಟ್‌ನ ದರ | ರೂ. 10.30 |
| | ವಿದ್ಯುತ್ ತೆರಿಗೆ @9% | ರೂ. 0.927 |
| 3 | ನಾಲ್ಕು ವಾರಗಳಿಗೆ ಯುನಿಟ್‌ಗಳು | 78 |
| 4 | ಎನರ್ಜಿ ಶುಲ್ಕ | ರೂ. 800 |
| 5 | ವಿದ್ಯುತ್ ತೆರಿಗೆ @9% (01-08-2018 ರಿಂದ) | ರೂ. 72 |
| | ಒಟ್ಟು | ರೂ. 872 |
| ವಿ.ಸೂ. ಮೊದಲ ಪಾವತಿಯ ಹಣ ಮಿಕ್ಕಿದ್ದಲ್ಲಿ ಅದನ್ನು ನಂತರದ ಮರು ಪಾವತಿ (ರೀಚಾರ್ಜ/ನವೀಕರಣ) ಅವಧಿಗೆ ಬಳಸಿಕೊಳ್ಳುವುದು. ಮೊದಲ ಪಾವತಿಯ ಉಳಿಕೆ ಮೊತ್ತ ರೂ. 872/- ಕ್ಕಿಂತ ಕಡಿಮೆ ಇದ್ದಲ್ಲಿ ವ್ಯತ್ಯಾಸ ಮೊತ್ತವನ್ನು ಅಥವಾ ಗ್ರಾಹಕರು ಇಚ್ಛೆಪಟ್ಟಲ್ಲಿ ಹೆಚ್ಚಿನ ಮೊತ್ತವನ್ನು ಕಟ್ಟಿಸಿಕೊಳ್ಳುವುದು. | | |

ಮೇಲೆ ತಿಳಿಸಿದ ವಿಷಯಗಳಿಗೆ ಸಂಬಂಧಿಸಿದಂತೆ ಎಲ್ಲಾ ಸಂಬಂಧಿತ ಉಪವಿಭಾಗದ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಎಲ್.ಟಿ-7 ಸ್ಥಾವರಗಳಿಗೆ ಕಡ್ಡಾಯವಾಗಿ 1 : 1 ಅನುಪಾತದಲ್ಲಿ ಪ್ರೋಗ್ರಾಂ ಆಗಿರುವ ಪೂರ್ವಪಾವತಿ ಮಾಪಕಗಳನ್ನು ಮಾತ್ರ ಉಪಯೋಗಿಸುವುದು. ಈ ಸುತ್ತೋಲೆಯು ಮುಂದಿನ ಆದೇಶ ಹೊರಡಿಸುವವರೆಗೂ ಚಾಲ್ತಿಯಲ್ಲಿರುತ್ತದೆ.

ಪ್ರಧಾನ ವ್ಯವಸ್ಥಾಪಕರು
(ತಾಂತ್ರಿಕ)

ಪ್ರತಿಯನ್ನು :

1. ಮುಖ್ಯ ಇಂಜಿನೀಯರ್ (ವಿ), ಕಾರ್ಯ ಮತ್ತು ಪಾಲನೆ ವಲಯ, ಹು.ವಿ.ಸ.ಕಂ.ನಿ. ಹುಬ್ಬಳ್ಳಿ/ಬೆಳಗಾವಿ.
2. ಎಲ್ಲ ಅಧೀಕ್ಷಕ ಇಂಜಿನೀಯರ್ (ವಿ), ಕಾರ್ಯ ಮತ್ತು ಪಾಲನಾ ವೃತ್ತ, ಹೆಸ್ಕಾಂ,
3. ಎಲ್ಲ ಕಾರ್ಯನಿರ್ವಾಹಕ ಇಂಜಿನೀಯರ್ (ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಹೆಸ್ಕಾಂ
4. ಎಲ್ಲ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ (ವಿ), ಕಾರ್ಯ ಮತ್ತು ಪಾಲನಾ ಉಪ ವಿಭಾಗ, ಹೆಸ್ಕಾಂ
5. ಆಪ್ತ ಕಾರ್ಯದರ್ಶಿ, ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು (ತಾಂತ್ರಿಕ), ನಿಗಮ ಕಛೇರಿ, ಹೆಸ್ಕಾಂ, ಹುಬ್ಬಳ್ಳಿ.
6. ಎಮ್.ಎಫ್/ಓ.ಸಿ.